**ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.**

---

ಕ್ರಿಮಿನಲ್ ಮಿಸ್ **ನಂ** : **192/2022** **ದಿನಾಂಕ** : **21-02-2024**

ಪಿ.**ಡಬ್ಲ್ಯೂ** : **1**

---

**ಹೆಸರು** **ವನಜಾಕ್ಷಿ** **ದಿಃ 21-02-2024**

**ಗಂಡನ ಹೆಸರು** **ಮಧು ಕುಮಾರ್**

**ವಯಸ್ಸು** **33 ವರ್ಷ**

**ಉದ್ಯೋಗ** **ಗೃಹಿಣಿ**

**ವಾಸ** **ಪೊನ್ನಾಥಪುರ**

**ವಿಧಿಬದ್ಧವಾಗಿ**
**ಪ್ರಮಾಣೀಕರಿಸಲಾಯಿತು.**

ಃಃ ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತುಃಃ

*******

**ಃಃಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ ಬಿ ಸಿ ಎನ್ ರವರಿಂದಃಃ**

ನನ್ನ ಮತ್ತು ಎದುರುದಾರರ ವಿವಾಹವು ದಿಃ**03-04-2006** ರಂದು ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿ ಹಿಂದು ಸಂಪ್ರಾಯದಂತೆ ನೆರವೇರಿರುತ್ತದೆ**.** ಮದುವೆ ಸಮಯದಲ್ಲಿ ಎದುರುದಾರರ ಬೇಡಿಕೆಯಂತೆ **30** ಗ್ರಾಂ ತೂಕದ ಒಟ್ಟು **2** ಚಿನ್ನದ ಬಳೆ**,** ಒಂದು ಜೊತೆ ಚಿನ್ನದ ಓಲೆ**, 20** ಗ್ರಾಂ ನ ಚಿನ್ನದ ಮಾಂಗಲ್ಯ ಸರ**, 2** ಚಿನ್ನದ ಉಂಗುರ**,** ಎದುರುದಾರರಿಗೆ **20** ಗ್ರಾಂ ನ ಚಿನ್ನದ ಕೊರಳು ಸರ**,** ಒಂದು ಉಂಗುರ ಹಾಗೂ **50** ಸಾವಿರ ರೂಪಾಯಿ ನಗದು**,** ಮತ್ತು ಇತರೆ ಖರ್ಚುಗಳನ್ನು ನೀಡಿರುತ್ತೇವೆ**.** ನಮ್ಮ ದಾಂಪತ್ಯದ ಫಲವಾಗಿ **2** ಮತ್ತು **3** ನೇ ಅರ್ಜಿದಾರರು ಜನಿಸಿದ್ದು ಈಗ ನನ್ನ ಜೊತೆ ವಾಸವಿದ್ದು ಇಬ್ಬರಿಗೂ **14** ಮತ್ತು **13** ವರ್ಷ ವಯಸ್ಸಾಗಿದ್ದು ಶಾಲೆಗೆ ಹೋಗುತ್ತಾರೆ**.** ಮದುವೆ ನಂತರ ನನ್ನ ಅಜ್ಜ ಅಜ್ಜಿ ನಿರ್ಮಿಸಿದ್ದ ಮನೆಯಲ್ಲಿ ನಾವು ವಾಸಿಸುತ್ತಿದ್ದೆವು**.** ನಾನು ಮತ್ತು ಎದುರುದಾರರು **2012** ನೇ ಇಸವಿಯವರೆಗು ಜೊತೆಯಲ್ಲಿ ವಾಸವಿದ್ದೆವು**.** ಎದುರುದಾರರುಇದ್ದಕ್ಕಿದಂತೆ ದುಶ್ಚಟಗಳಿಗೆ ಒಳಗಾಗಿ ತನ್ನ ನಡವಳಿಕೆಯನ್ನು ಬದಲಾಯಿಸಿಕೊಂಡು ನನಗೆ ಹೊಡೆಯುವುದು ಬಡಿಯುವುದು ಮಾಡಿ ಹಿಂಸೆ ಕೊಟ್ಟಿರುತ್ತಾರೆ**.** ಅವರಿಗೆ ಧೂಪಪಾನ ಮತ್ತು ಮದ್ಯಪಾನ ಮಾಡುವ ಚಟಗಳಿದ್ದು ಬೇರೊಂದು ಸ್ತ್ರಿಯೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡು ಇಬ್ಬರು ಜೊತೆಯಲ್ಲಿ ಜೀವನ ನಡೆಸುತ್ತಿದ್ದು ಅವರಿಗು ಇಬ್ಬರು ಮಕ್ಕಳು ಇರುತ್ತಾರೆ**.**

**2.** ಎದುರುದಾರರು ಸರಿ ಹೋಗಬಹುದೆಂದು ನಾನು ಬಹಳಷ್ಟು ಸಹಿಸಿಕೊಂಡೆನು ಆದರೆ ಎದುರುದಾರರು ನನಗೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡಿ ಮನೆಯಿಂದ ಹೊರಹಾಕಿರುತ್ತಾರೆ. ಎದುರುದಾರರು ಮನೆಗೆ ಅಗತ್ಯ ವಸ್ತುಗಳನ್ನು ತಂದುಕೊಡುತ್ತಿರಲಿಲ್ಲ. ನಾನು ನನ್ನ ತವರು ಮನೆಯಿಂದ ಪಡಿತರವನ್ನು ತಂದು ಅಡುಗೆ ಮಾಡುತ್ತಿದ್ದಾಗ ಎದುರುದಾರರು ಒಲೆಗೆ ನೀರು ಹಾಕಿ ಪದೇ ಪದೇ ಕಿರುಕುಳ ನೀಡುತ್ತಿದ್ದರು. ನನಗೆ ಮನೆಯಲ್ಲಿ ಇರಬೇಡ ಮನೆ ಬಿಟ್ಟು ಹೋಗು ಎಂದು ಪದೇ ಪದೇ ಮದ್ಯಪಾನ ಮಾಡಿಕೊಂಡು ಬಂದು ಹೊಡಿಬಡಿ ಮಾಡುತ್ತಿದ್ದರು.

**3.** ಎದುರುದಾರರ ವಿಚಾರವನ್ನು ನನ್ನ ತಂದೆ ತಾಯಿಗೆ ತಿಳಿಸಿದಾಗ ಎದುರುದಾರರ ಹಿಂಸೆ ತಪ್ಪಿಸಲು ನನ್ನ ತಂದೆ ತಾಯಿ **50** ಸಾವಿರ ರೂಪಾಯಿಯನ್ನು ಎದುರುದಾರರಿಗೆ ನೀಡಿರುತ್ತಾರೆ. ಸದರಿ ಹಣವನ್ನು ಎದುರುದಾರರು ತನ್ನ ದುಶ್ಚಟಗಳಿಗೆ ಉಪಯೋಗಿಸಿರುತ್ತಾರೆ. ಪರಸ್ತ್ರಿಯೊಂದಿಗಿನ ಅನೈತಿಕ ಸಂಬಂಧ ವಿರೋದ ಮಾಡಿದಕ್ಕೆ ನಿನ್ನನ್ನು ಬಿಟ್ಟರು ಪರವಾಗಿಲ್ಲ ಆಕೆಯನ್ನು ಬಿಡುವುದಿಲ್ಲ ಎಂದು ತಿಳಿಸಿ ಹಾಲಿ ಈಗ ಬೇರೆಯವರೊಂದಿಗೆ ಜೀವನ ಮಾಡುತ್ತಿದ್ದಾರೆ. ಎದುರುದಾರರು ನನ್ನನ್ನು ಮತ್ತು ನನ್ನ ಮಕ್ಕಳನ್ನು ಮನೆಯಿಂದ ಬಲವಂತವಾಗಿ ಹೊರಹಾಕಿದ್ದು ನಾವು ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ. ಈ ಬಗ್ಗೆ ಊರ ಹಿರಿಯರ ಸಮುಖದಲ್ಲಿ ಎದುರುದಾರರಿಗೆ ಬುದ್ದಿವಾದ ತಿಳಿಸಿದರು ಮತ್ತು ಪೊಲೀಸ್ ಠಾಣೆಗೆ ದೂರು ನೀಡಿದರು ಎದುರುದಾರರು ಯಾರ ಮಾತನ್ನು ಕೇಳಿರುವುದಿಲ್ಲ. ಅಲ್ಲದೇ ಎದುರುದಾರರು ತನ್ನ ಮದ್ಯಪಾನ ಖರ್ಚಿಗಾಗಿ ನನ್ನ ಬಳಿ ಇದ್ದ ಒಡವೆಗಳನ್ನು ಮಾರಾಟ ಮಾಡಿರುತ್ತಾರೆ.

**4.** ನನ್ನನ್ನು ಮತ್ತು ನನ್ನ ಮಕ್ಕಳಿಗೆ ಯಾವುದೇ ರೀತಿಯ ಖರ್ಚು ವೆಚ್ಚ ಮಾಡದೇ ನಮ್ಮನ್ನು ನಿರ್ಲಕ್ಷಿಸಿರುವ ಕಾರಣ ನಮ್ಮ ದೈನಂದಿನ ಜೀವನೋಪಾಯಕ್ಕಾಗಿ ಬಹಳ ಸಮಸ್ಯೆಯಾಗಿರುತ್ತದೆ. ನಾನು **10** ನೇ ತರಗತಿಯವರೆಗೆ ಓದಿದ್ದು ಈಗ ಯಾವುದೇ ಕೆಲಸ ಮಾಡುವ ಶಕ್ತಿ ಇರುವುದಿಲ್ಲ. ಆದ ಕಾರಣ ನಮಗೆ ಯಾವುದೇ ಆದಾಯದ ಮೂಲಗಳು ಇರುವುದಿಲ್ಲ. ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವರ್ಷಕ್ಕೆ **25** ಸಾವಿರ ರೂಪಾಯಿಗಳ ಪ್ರತ್ಯೇಕ ಖರ್ಚು ಇರುತ್ತದೆ. ಅಲ್ಲದೆ ನಮ್ಮಗಳ ದಿನನಿತ್ಯದ ಊಟ, ವಸತಿ, ಬಟ್ಟೆ, ಇತ್ಯಾದಿ ಖರ್ಚುಗಳಿಗೆ ತಿಂಗಳಿಗೆ ನನಗೆ **10** ಸಾವಿರ ರೂಪಾಯಿ, **2** ಮತ್ತು **3** ನೇ ಅರ್ಜಿದಾರರಿಗೆ ತಲಾ **5** ಸಾವಿರ ರೂಪಾಯಿಗಳ ಒಟ್ಟು ಖರ್ಚು ಇರುತ್ತದೆ. ನನ್ನ ತವರು ಮನೆಯವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದಿಲ್ಲ. ಎದುರುದಾರರು ವ್ಯವಸಾಯ ಮಾಡುತ್ತಿದ್ದು ಅವರ ಹೆಸರಿನಲ್ಲಿ ತೋಟ, ಜಮೀನು ಮತ್ತು ಸ್ವಂತ ಮನೆಗಳು ಇರುತ್ತದೆ. ಸದರಿ ಜಮೀನಿನಲ್ಲಿ ಶುಂಠಿ, ಬೀನ್ಸ್, ಜೋಳ, ಎಲೆಕೋಸು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದು ಎದುರುದಾರರಿಗೆ ಒಳ್ಳೆ ದುಡಿಮೆ ಮತ್ತು ಆದಾಯ ಇದ್ದು ಅವರಿಗೆ ವರ್ಷಕ್ಕೆ ಒಟ್ಟು **8** ಲಕ್ಷ ರೂಪಾಯಿ ಆದಾಯ ಇದ್ದು ನನ್ನನ್ನು ಮತ್ತು ನನ್ನ ಮಕ್ಕಳನ್ನು ನೋಡಿಕೊಳ್ಳುವ ಶಕ್ತಿ ಇರುತ್ತದೆ. ಆದ ಕಾರಣ ನಮ್ಮಗಳ ಜೀವನ ನಿರ್ವಾಹಣೆಗಾಗಿ ನಾನು ಅರ್ಜಿಯಲ್ಲಿ ಕೋರಿರುವ ಪರಿಹಾರವನ್ನು ಹೊಂದುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ನಾನು ನ್ಯಾಯಾಲಯಕ್ಕೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಕಂಡಂತೆ ಕ್ರಮವಾಗಿ ಗುರುತಿಸಲಾಯಿತು.

| | | |
|---|---|---|
| ನಿಪಿ | **1** | ವಿವಾಹ ಆಮಂತ್ರಣ ಪತ್ರಿಕೆ |
| ನಿಪಿ | **2** | ಪೋಟೋ |
| ನಿಪಿ | **3** | ಸರ್ವೆ ನಂ**. 91/17** ರ **2022-23** ನೇ ಸಾಲಿನ ಪಹಣಿ ಪತ್ರಿಕೆ |
| ನಿಪಿ | **4** | ಸರ್ವೆ ನಂ**.77/**ಪಿ**7** ರ **2019-2020** ನೇ ಸಾಲಿನ ಪಹಣಿ ಪತ್ರಿಕೆ |
| ನಿಪಿ | **5** | ಸರ್ವೆ ನಂ**.89/1** ರ **2023-24** ನೇ ಸಾಲಿನ ಪಹಣಿ ಪತ್ರಿಕೆ |
| ನಿಪಿ | **6** | ಸರ್ವೆ ನಂ**.89/3** ರ **2023-24** ನೇ ಸಾಲಿನ ಪಹಣಿ ಪತ್ರಿಕೆ |

**(ಎದುರುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ**

(ಪ್ರಸನ್ನಕುಮಾರ್ ಸಿ.)
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ.** ಬೇಲೂರು.

Case Called

Petitioner present. She got herself examined as PW-1 and examined orally. Ex.P-1 to P-6 marked.

For Cross examination of PW-1 by:30-04-2024

**Civil Judge and JMFC-Belur.**